ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:2172/2023

ಸಿ.ಡಬ್ಲ್ಯು.9 ಪಿ.ಡಬ್ಲ್ಯೂ : 2

| | |
|---|---|
| ಸಾಕ್ಷಿದಾರರ ಹೆಸರು | ರತ್ನಾಕರ ಶೆಟ್ಟಿ |
| ತಂದೆಯ ಹೆಸರು | ಹಿರಿಯಣ್ಣ ಶೆಟ್ಟಿ |
| ವಯಸ್ಸು | 66 ವರ್ಷ |
| ಉದ್ಯೋಗ | ಅಂಗಡಿ ವ್ಯಾಪಾರ |
| ವಾಸಸ್ಥಳ | ಎರ್ಮಾಳ್. |

ದಿನಾಂಕಃ 27.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ಚಾ.ಸಾ.2 ರವರ ಪರಿಚಯ ಇದೆ. ಚಾ.ಸಾ.2 ರವರ ಮನೆಯಲ್ಲಿ ಚಿನ್ನದ ಆಭರಣಗಳು, ಬೆಳ್ಳಿ ಆಭರಣಗಳು ಕಳ್ಳತನವಾಗಿದ್ದವು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಅದರಲ್ಲಿ ನನ್ನ ಸಹಿ ಇದೆ ಎಂದು ಅದನ್ನು ಕಳ್ಳತನವಾಗಿದ್ದ ಮನೆಯಲ್ಲಿ ತಯಾರಿಸಿದರೆಂದು ಅಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯವರು ಸದ್ರಿ ದಾಖಲೆಯನ್ನು ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದು, ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ.1(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯವರು ಇನ್ನೊಂದು ದಾಖಲೆಯನ್ನು ನೋಡಿ ಅದು ಕಳ್ಳತನ ಮಾಡಿದ್ದ ವ್ಯಕ್ತಿಗಳನ್ನು ಕಳ್ಳತನ ಮಾಡಿದ ದಾಖಲೆ ಎಂದು ಹಾಗೂ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯವರು ಅವರು ಸಹಿ ಮಾಡಿದ ದಾಖಲೆ ಹಾಗೂ ಸಹಿಯನ್ನು ನೋಡಿ ಗುರ್ತಿಸಿದ್ದು, ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ.2(ಎ) ಎಂದು ಗುರ್ತಿಸಲಾಯಿತು. ಪೋಲೀಸಿನವರು ಕಳ್ಳತನವಾಗಿದೆ ಎಂದು ಹೇಳುವ ಮನೆಗೆ ಕರೆದುಕೊಂಡು ಬಂದಿದ್ದ ಆರೋಪಿಯವರನ್ನು ನೀವು ನೋಡಿದರೆ ಗುರ್ತಿಸಬಲ್ಲಿರಾ ಎಂದರೆ ತುಂಬಾ ವರ್ಷಗಳು ಆಗಿರುವುದರಿಂದ ಆಗುವುದಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ಚಾ.ಸಾ.1 ಹಾಗೂ ಅವರ ಭಾವ ಇದ್ದರು. ಹಿಂಬದಿಯ ಬಾಗಿಲನ್ನು ಹೊಡೆದು ಕಳ್ಳತನ ಮಾಡಿದರು ಎಂದು ತಿಳಿಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಎಸ್.ಜಿ. ವಕೀಲರವರಿಂದಃ

ನಾನು ದಿನಸಿ ಅಂಗಡಿಯ ವ್ಯಾಪಾರವನ್ನು ಮಾಡುತ್ತೇನೆ. ನನ್ನ ಅಂಡಿಯಿಂದ ಚಾ.ಸಾ.1 ರವರ ಮನೆಯು ಸುಮಾರು 200 ಮೀಟರ್ ದೂರದಲ್ಲಿ ಇದೆ. ಚಾ.ಸಾ.1 ರವರ ಮನೆಯ ಬಳಿ ಸಾಕಷ್ಟು ಮನೆಗಳು ಇವೆ ಎಂದರೆ ಹಾಸು ಪಾಸಿನಲ್ಲಿ ಇಲ್ಲ, ಸ್ವಲ್ಪ ದೂರದಲ್ಲಿ ಇವೆ. ನಾನು ಆ ದಿನ ಅಂಗಡಿಯಲ್ಲಿ ಇದ್ದೆನು. ನಾನು ಅಂಗಡಿಯಲ್ಲಿ ಇದ್ದಾಗ ಪೋಲೀಸಿನವರು ನನ್ನನ್ನು ಬರಲು ಹೇಳಿದರು. ನೀವು ಸ್ಥಳಕ್ಕೆ ಹೋದಾಗ ಪೋಲೀಸಿನವರು ಬರೆದಿದ್ದ ದಾಖಲೆಗೆ ಸಹಿ ಮಾಡಿರುತ್ತೀರಾ ಎಂದರೆ ಇಲ್ಲ, ನಾನು ಹೋದಾಗ ಬರೆದರು, ಅದನ್ನು ಓದಿ ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ನಾನು ಸುಮಾರು 10 ನಿಮಿಷಗಳ ಕಾಲ ಇದ್ದೆನು. ನಾನು ಸ್ಥಳಕ್ಕೆ ಹೋದಾಗ ಪೋಲೀಸಿನವರು, ಮನೆಯವರು ಇದ್ದರು, ಬೇರೆ ಯಾರೂ ಇರಲಿಲ್ಲ. ಚಾ.ಸಾ.1 ರವರೊಂದಿಗೆ ನೀವು ಎಷ್ಟು ಬಾರಿ ಪೋಲೀಸ್ ಠಾಣೆಗೆ ಹೋಗಿದ್ದೀರಿ ಎಂದರೆ ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ಘಟನೆಯಾದ ಒಂದು ವರ್ಷದ ನಂತರ ನೀವು ಚಾ.ಸಾ.1 ರವರೊಂದಿಗೆ ಪೋಲೀಸ್ ಠಾಣೆಗೆ ಹೋಗಿದ್ದೀರಾ ಎಂದರೆ ಇಲ್ಲ. 2 ನೇ ಬಾರಿ ಸಹಿ ಮಾಡುವಾಗ ನಾನು ಸ್ಥಳದಲ್ಲಿ 5 ನಿಮಿಷಗಳ ಕಾಲ ಇದ್ದೆನು. 5 ನಿಮಿಷಗಳ ಕಾಲದಲ್ಲಿ ಪೋಲೀಸಿನವರು ಏನು ಬರೆದುಕೊಂಡರು ಎನ್ನುವುದು ನಿಮಗೆ ತಿಳಿದಿಲ್ಲ ಎಂದರೆ ಹೌದು. ಚಾ.ಸಾ.1 ರವರ ಮನವಿಯ ಮೇರಗೆ ನೀವು ಸಹಿಗಳನ್ನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಚಾ.ಸಾ.1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ ಉಡುಪಿ.